ತರಗತಿಯಲ್ಲಿದ್ದ ಶಿಕ್ಷಣ ಮನೆಗೆ ಬಂದು, ಕಪ್ಪುಹಲಗೆಗಳ ಬದಲು ಕಂಪ್ಯೂಟರ್ ಪರದೆಗಳು ಬಂದು, ಶಾಲಾ ಕಾಲೇಜುಗಳಿಗೆ ಹೋಗುವ ಬದಲು ಮನೆಯಲ್ಲೇ ಶಾಲಾ ಕಾಲೇಜುಗಳ ಶಾಸ್ತ್ರವೂ ನಡೆದುಹೋಗಲು ತೊಡಗಿ ವರ್ಷ ತುಂಬಿತು. ಈ ಪರಿಸ್ಥಿತಿಯಲ್ಲಿ ಆನ್‌ಲೈನ್ ತರಗತಿಗಳು ನಮ್ಮ ಉನ್ನತ ಶಿಕ್ಷಣ ವ್ಯವಸ್ಥೆಯ ಎರಡು ವಿಚಿತ್ರ ಸಂಗತಿಗಳನ್ನು ತೆರೆದಿಟ್ಟಿವೆ. ಕಲಿಕೆಯಲ್ಲಿ ಈಗಾಗಲೇ ಉತ್ತಮರಾದ ವಿದ್ಯಾರ್ಥಿಗಳಿಗೆ ಇದು ಭೌತಿಕ ಕಾಲೇಜಿನ ಅನಗತ್ಯ ಜಂಜಾಟದಿಂದ ಮುಕ್ತವಾಗಿ, ತಮ್ಮದೇ ಕಲಿಕಾ ಶಿಸ್ತಿನ ಪ್ರಕಾರ ವಿದ್ಯಾರ್ಜನೆ ಮಾಡಲು ಅನುವು ಮಾಡಿಕೊಟ್ಟಿದೆ. ಮಿಕ್ಕ ವಿದ್ಯಾರ್ಥಿಗಳಿಗೆ ಇದು ಕಲಿಕೆಗೆ ಅಗತ್ಯವಾಗಿ ಬೇಕಾದ ಶಾಲಾ ಕಾಲೇಜುಗಳ ಸಾಮಾಜಿಕ ಹಿನ್ನೆಲೆಯನ್ನೇ ಕಸಿದುಕೊಂಡಿದೆ. ಇವೆರಡರಲ್ಲಿ ಯಾವುದೇ ಸಾಧ್ಯತೆ ಇರಲಿ, ಒಟ್ಟಾರೆಯಾಗಿ, ಆನ್‌ಲೈನ್ ತರಗತಿ ನಮ್ಮ ಶಿಕ್ಷಣ ವ್ಯವಸ್ಥೆಗೆ ಒಂದು ಹೊಸ ಸವಾಲನ್ನು ತಂದೊಡ್ಡಿದೆ. ಅಷ್ಟೇ ಅಲ್ಲದೇ, ನಮ್ಮ ಶಿಕ್ಷಣದ ಆಧಾರಪ್ರಾಯವಾದ ನಂಬಿಕೆಗಳ ಕುರಿತೇ ಕೆಲವು ಪ್ರಶ್ನೆಗಳನ್ನು ಎತ್ತುವಂತೆ ಮಾಡಿದೆ.

## ಶಿಕ್ಷಣದ ಆವರಣ

ಶಿಕ್ಷಣಕ್ಕೆ ಅಗತ್ಯವಾದ ಆದರೆ ನಾವು ಹೆಚ್ಚಾಗಿ ಗಮನಿಸದ ಕೆಲವು ರೂಢಿಯ ಅಂಶಗಳಿವೆ. ಅದರಲ್ಲಿ ಮೊದಲನೆಯದು ಕಲಿಕೆಯ ಆವರಣ. ಕಲಿಕೆಗೆ ಒಂದು ನಿರ್ದಿಷ್ಟ ಸ್ಥಳದ ಅಗತ್ಯವಿದೆ. ಅದನ್ನು ಸುಮಾರು ಹೀಗೆ ಚಿತ್ರಿಸಿಕೊಳ್ಳಿ. ಮನೆಯಲ್ಲಿ ಯಾವುದೇ ಪೂಜೆಯೋ ಪುಣ್ಯಕಾರ್ಯವೋ ಇದ್ದಾಗ ಜೋಯಿಸರು ಒಂದು ಕ್ಷೇತ್ರವನ್ನು ಶುದ್ಧ ಮಾಡಿ ಪೂಜೆಯ ಆವರಣಕ್ಕೆ ಮೀಸಲಿಡುತ್ತಾರೆ. ನೈವೇದ್ಯದ ಅಡುಗೆಗಳಿಗೆ ಮಾತ್ರವೇ ಎಂದು ಒಂದು ಮಂಡಲ ರಚಿಸಿ ಅದನ್ನು ಪ್ರತ್ಯೇಕ ಮಾಡುತ್ತಾರೆ. ಹಾಗೆಯೇ, ಆಟಗಳಲ್ಲೂ. ಗೆರೆ ಎಳೆದೋ ಅಥವಾ ಗಡಿಯನ್ನು ಗುರುತಿಸಿಯೋ ಇದು ಆಟದ ಆವರಣ ಅಥವಾ ಆಟದ ನಿಯಮಗಳ ಆವರಣ ಎಂದು ಸಿದ್ಧ ಮಾಡಲಾಗುತ್ತದೆ. ಇದು ಕೇವಲ ನಮ್ಮ ಉಪಯೋಗಕ್ಕೆ ಮಾತ್ರವಲ್ಲ. ನಮ್ಮನ್ನು ನೋಡುತ್ತಿರುವ ಇತರರೂ ನಾವು ಮಾಡುತ್ತಿರುವ ಪೂಜೆಯನ್ನೋ ಆಡುತ್ತಿರುವ ಆಟವನ್ನೋ ಗಮನಿಸಿ ಗುರುತಿಸುವುದಕ್ಕೂ ಇಂತಹ ಗಡಿ ಗುರುತಿಸುವಿಕೆ ಅಗತ್ಯ.

ಶಾಲಾ ಕಾಲೇಜುಗಳಲ್ಲಿ ಭೌತಿಕ ಮೂಲಸೌಕರ್ಯಗಳೇ ಇಂತಹ ಗಡಿ ಗುರುತಿಸುವ ಕೆಲಸವನ್ನು ಮಾಡಿಬಿಡುತ್ತವೆ. ಇದು ಉಪನ್ಯಾಸದ ಕೊಠಡಿ, ಇದು ಪ್ರಯೋಗಶಾಲೆ, ಹೀಗೆ. ಆದರೆ ಮನೆಯಲ್ಲಿ ಇಂತಹ ವಿಂಗಡಣೆ ಸಾಧ್ಯವಿಲ್ಲ. ಕೆಲವರಿಗೆ ಖಾಸಗಿ ಕೋಣೆ ಇರಬಹುದು. ಹೆಚ್ಚಿನ ವಿದ್ಯಾರ್ಥಿಗಳಿಗೆ ಅಂಥದ್ದು ಇಲ್ಲದೆಯೂ ಇರಬಹುದು. ಆದರೆ ಕೇವಲ ಭೌತಿಕ ಸ್ಥಳದ ಕೊರತೆಗಿಂತಲೂ ಮುಖ್ಯವಾಗಿ ಇಂತಹ ಮಾನಸಿಕ ಆವರಣದ ನಿರ್ಮಾಣವೇ ಇಲ್ಲಿ ಸಮಸ್ಯೆ. ಇಲ್ಲಿ 'ಕಲಿಕೆ' ಎನ್ನುವಂಥದ್ದು ನಡೆಯುತ್ತಿದೆ. ನಮ್ಮ ಮಿಕ್ಕೆಲ್ಲ ಕ್ರಿಯಾಕರ್ಮಗಳು ಇದರ ಸುತ್ತ ನಡೆಯಬೇಕು ಎಂದು ಹೇಳಲು ಆಗುತ್ತಿಲ್ಲ. ಅದೇ, ಮನೆಯಲ್ಲಿ ಒಂದು ಪೂಜೆಯೋ ಹೋಮವೋ ನಡೆಯುತ್ತಿದ್ದರೆ, ಮಿಕ್ಕೆಲ್ಲರ ಕ್ರಿಯಾಕರ್ಮಗಳು ಅದನ್ನೇ ಕೇಂದ್ರವಾಗಿಟ್ಟುಕೊಂಡು ಅದರ ಸುತ್ತಲೇ ನಡೆಯುತ್ತವೆ. ಇದರ ಅರ್ಥ ಕಲಿಕೆಯೇ ಅತಿ ಮುಖ್ಯ. ಜೀವನದ ಇತರ ಅಂಶಗಳು ಮುಖ್ಯವಲ್ಲ ಎಂದಲ್ಲ. ಆದರೆ ಕಲಿಕೆಯನ್ನು ಒಂದು ಗಂಭೀರ ಚಟುವಟಿಕೆಯಾಗಿ ಗುರುತಿಸುವ ಒಂದು ಕ್ರಮ ಬೇಕು. ಅದು ಕೇವಲ ದಿನಾ ಆಫೀಸಿಗೆ ಹೋಗಿ ಮಾಡಿ ಮುಗಿಸಬೇಕಾದ ಕೆಲಸದ ರೀತಿಯ ಇನ್ನೊಂದು ಕೆಲಸವಲ್ಲ.

## ಶಿಕ್ಷಣದ ಸಾಮಾಜಿಕತೆ

ಕಲಿಕೆಯ ಕುರಿತು ನಮ್ಮ ಮನಸ್ಸಿನಲ್ಲಿ ಇರುವ ಚಿತ್ರಣ ಹೆಚ್ಚಾಗಿ ವೈಯಕ್ತಿಕವಾದದ್ದು. ಅಂದರೆ, ಒಬ್ಬ ವಿದ್ಯಾರ್ಥಿ ಒಂದು ಪುಸ್ತಕವನ್ನೋ ಅಥವಾ ಪಾಠವನ್ನೋ ಏಕಾಂಗಿಯಾಗಿ ಕುಳಿತು ಮನನ ಮಾಡುವುದು ಎನ್ನುವ ರೀತಿ. ಇದು ವೈಯಕ್ತಿಕ ಮಟ್ಟದಲ್ಲಿ ನಿಜವಾದರೂ ಕಲಿಕೆ ನಿಜಕ್ಕೂ ಸಾಮಾಜಿಕವಾದದ್ದು. ಅಂದರೆ, ಮಿಕ್ಕ ಎಲ್ಲಾ ಚಟುವಟಿಕೆಗಳ ರೀತಿಯಲ್ಲಿಯೇ ಕಲಿಕೆಯೂ ಸಾರ್ವತ್ರಿಕವಾಗಿ ಲಭ್ಯವಿರುವಂಥ ಒಂದು ಕ್ರಿಯಾಪ್ರಪಂಚ. ನಾವು ಕಲಿಯುವುದು ಮಿಕ್ಕವರಿಂದ. ಮಿಕ್ಕವರು ಕಲಿಯುತ್ತಿರುವುದನ್ನು ನೋಡಿಯೇ ನಮಗೆ ಕಲಿಕೆಯ ಕುರಿತು ತಿಳಿವಳಿಕೆ ಮೂಡುವುದು. ಮಿಕ್ಕವರ ಕಲಿಕೆಯ ತುಲನೆಯಲ್ಲಿಯೇ ನಮ್ಮ ಕಲಿಕೆಯ ಬೆಲೆ ನಮಗೆ ಗೊತ್ತಾಗುವುದು. ಮಿಕ್ಕವರು ಕಲಿಕೆಗೆ ಬೆಲೆ ಕೊಡುವುದರಿಂದಲೇ ನಮಗೆ ಕಲಿಕೆಯ ಮೌಲ್ಯ ತಿಳಿಯುವುದು. ಹೀಗೆ, ಯಾವ ದಿಕ್ಕಿನಿಂದ ನೋಡಿದರೂ ಕಲಿಕೆಯ ಸಾಮಾಜಿಕತೆಯೇ ಗೋಚರಿಸುತ್ತದೆ. ಆನ್‌ಲೈನ್ ಶಿಕ್ಷಣ ಇಂತಹ ಸಾಮಾಜಿಕತೆಯನ್ನು ಹೇಗೆ ಮೂಡಿಸಬೇಕು ಎನ್ನುವುದು ಒಂದು ದೊಡ್ಡ ಪ್ರಶ್ನೆ. 'ಕೋರ್ಸೆರಾ', 'ಎಡೆಕ್ಸ್' ಮುಂತಾದ ದೊಡ್ಡ 'ಮೂಕ್' (ಮಾಸಿವ್ ಆನ್‌ಲೈನ್ ಓಪನ್ ಕೋರ್ಸ್) ಸಂಸ್ಥೆಗಳು ಈಗ ಗಮನ ಹರಿಸುತ್ತಿರುವುದು ಈ ಅಂಶದ ಬಗ್ಗೆಯೇ. ಕಲಿಕೆಯ ಸಾಮಾಜಿಕತೆಯನ್ನು ಆನ್‌ಲೈನ್ ಶಿಕ್ಷಣದಲ್ಲಿ ಪುನರ್ ರೂಪಿಸುವುದು ಹೇಗೆ ಎಂದು.

## ಶಿಕ್ಷಣದ ಮಾನಸಿಕತೆ

ಶಿಕ್ಷಣದ ಅತೀ ಮುಖ್ಯ ಅಂಶ ವಿದ್ಯಾರ್ಥಿಗಳು ಎಷ್ಟು ಕಲಿತರು ಎನ್ನುವುದಲ್ಲ. ಏಕೆಂದರೆ, ಹೇಗಿದ್ದರೂ ಶಾಲಾ



